ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಸಕಲೇಶಪುರ

CC No : 80/2022

CW.2 PW.10

ಹೆಸರು ಃ ಲಾವಣ್ಯ
ತಂದೆ ಃ ಸುಂದರ
ವಯಸ್ಸು ಃ 19 ವರ್ಷ
ಉದ್ಯೋಗ ಃ ಏನೂ ಇಲ್ಲ
ವಾಸ ಃ ಹಿರುಡಿ

ಸಾಕ್ಷಿಯನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದಃ ದಿಃ 08-07-2024

1 ನೇ ಆರೋಪಿಯು ನನ್ನ ಮಾವನ ಮಗ ಆಗಿರುತ್ತಾರೆ. 2 ನೇ ಆರೋಪಿ ನನ್ನ ಮಾವ ಆಗಿರುತ್ತಾರೆ. 3 ನೇ ಆರೋಪಿ ನನ್ನ ತಾಯಿ. 4 ನೇ ಆರೋಪಿ ನನ್ನ ಅಜ್ಜಿ ಮತ್ತು 5 ನೇ ಆರೋಪಿಯು ನನಗೆ ಅಣ್ಣನಾಗಬೇಕು. ನನ್ನ ತಂದೆಗೆ ನಾವು ಇಬ್ಬರು ಮಕ್ಕಳಿರುತ್ತೇವೆ. ನಾನು ನನ್ನ ಅಜ್ಜಿಯ ಮನೆಯಲ್ಲಿ ವಾಸವಿರುತ್ತೇನೆ. ನನ್ನ ಮತ್ತು 1 ನೇ ಆರೋಪಿ ನಡುವೆ ವಿವಾಹ ಆಗಿರುವುದಿಲ್ಲ. ನನ್ನ ತಂದೆಗೆ ನನ್ನ ಮಾವನ ಮನೆಗೆ ನಾನು ಹೋಗಿ ಬರುವುದು ಇಷ್ಟ ಇರಲಿಲ್ಲ. ಆದ್ದರಿಂದ ನನಗೆ ಬೇರೊಂದು ವ್ಯಕ್ತಿ ಜೊತೆ ವಿವಾಹ ಮಾಡಲು ಪ್ರಯತ್ನಪಟ್ಟಿದ್ದರು. ನನ್ನ ತಂದೆಗೂ ಮತ್ತು 1 ನೇ ಆರೋಪಿಗೂ ಅನ್ಯೋನ್ಯತೆ ಇರಲಿಲ್ಲ.

ಮಹಿಳಾ ಮತ್ತು ಮಕ್ಕಳ ರಕ್ಷಣಾ ಸಮಿತಿಯವರು ನನ್ನಿಂದ ಬಲವಂತವಾಗಿ ದಿಃ 30-06-2021 ರಂದು ಹೇಳಿಕೆ ಬರೆಸಿಕೊಂಡಿರುತ್ತಾರೆ. ನನ್ನನ್ನು ಬಲವಂತವಾಗಿ ಎರಡು ತಿಂಗಳುಗಳ ಕಾಲ ಪ್ರಚೋದನಾ ಸಂಸ್ಥೆಯಲ್ಲಿ ಇರಿಸಿಕೊಂಡಿದ್ದರು. ಪೋಲೀಸರು ಸಹ ನನ್ನಿಂದ ಬಲವಂತವಾಗಿ ಹೇಳಿಕೆ ಬರೆಸಿಕೊಂಡಿರುತ್ತಾರೆ. ಪೋಲೀಸರು ವೈದ್ಯರ ಮೂಲಕ ನನ್ನ ವೈದ್ಯಕೀಯ ಪರೀಕ್ಷೆ ಮಾಡಿಸಿರುತ್ತಾರೆ. ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ. ಇತ್ತೀಚೆಗೆ 1 ನೇ ಆರೋಪಿ ಜೊತೆ ನೊಂದಣಿ ವಿವಾಹ ನನ್ನ ಜೊತೆ ಆಗಿರುತ್ತದೆ.

ಪೋಲೀಸರು ನನ್ನ ಸಮಕ್ಷಮ ನಿಪಿ-2 ರಂತೆ ಮಹಜರ್ ಮಾಡಿರುತ್ತಾರೆ. ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ-2 ಸಿ ಎಂದು ಗುರುತಿಸಲಾಯಿತು. ಸದರಿ ಕಾಲಕ್ಕೆ ತೆಗೆದ ಪೋಟೋವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ನಾನು ಮಹಿಳಾ ವೈದ್ಯಾಧಿಕಾರಿಗೆ ಪತ್ರ ಬರೆದಿರುವುದಿಲ್ಲ ಬಲವಂತವಾಗಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ.

ನಾನು ಸಕಲೇಶಪುರ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ಸದರಿ ಹೇಳಿಕೆಯ ಲಕೋಟೆಯನ್ನು ತೆರೆದು ನೋಡಲಾಗಿ ಅದರ ಒಳಗಡೆ ಇರುವ ಹೇಳಿಕೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಒಪ್ಪಿಕೊಂಡ ಕಾರಣ ಸದರಿ ಹೇಳಿಕೆಯನ್ನು ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8 ಎ ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಮತ್ತೊಂದು ದಾಖಲೆಗೆ ಯಾವಾಗ, ಏಲ್ಲಿ, ಯಾವ ಉದ್ದೇಶಕ್ಕೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ದಾಖಲೆಯು ಪಂಚನಾಮೆ ಆಗಿದ್ದು ಅದನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9 ಎ ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು , ನೀಡಿ ಮುಂದೂಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಕಲೇಶಪುರ